## 2ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ **17/09/2025**

ಅಸಲು ದಾವೆ.ಸಂ. *99/2019*

ಪಿ.ಡಬ್ಲ್ಯೂ- *1*

(ಪಾಟೀ ಸವಾಲು ಶ್ರೀ. ಎ.ಎಸ್. ಎಮ್. ವಕೀಲರಿಂದ 6 7 ಮತ್ತು 10ನೇ ಪ್ರತಿವಾದಿಯರ ಪರವಾಗಿ )

ನಾನು ಲೇಟ್ ಬೆಟ್ಟೇಗೌಡರ ಎರಡನೇ ಹೆಂಡತಿ ಎಂದರೆ ಬೆಟ್ಟೇಗೌಡರು ತಮ್ಮ ಹಿಸ್ಸೆಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿದ್ದು ಸದರಿ ಕ್ರಯ ಪತ್ರಗಳಿಗೆ ನಾನಾಗಲಿ ಮತ್ತು ಬೆಟ್ಟೇಗೌಡರ ಹಿರಿಯ ಹೆಂಡತಿಯ ಮಗಳು ಮಮತರಾಗಲಿ ಸಹಿ ಮಾಡಿರುವುದಿಲ್ಲ ಎಂದು ಸದರಿ ಆಸ್ತಿಗಳ ಮಾರಾಟದ ವಿಚಾರ ನನಗೆ ಬೆಟ್ಟೇಗೌಡರನ್ನು ವಿವಾಹವಾದಗಲೇ ತಿಳಿದಿದ್ದು . ಸದರಿ ಸಮಯದಲ್ಲಿ ನನಗೆ 35 ವರ್ಷ ವಯಸ್ಸಾಗಿದ್ದು ಆ ಸಮಯದಲ್ಲೇ ತಿಳಿದಿತ್ತು. ನನ್ನ ಗಂಡ ಬೆಟ್ಟೇಗೌಡ ಅವರ ಹಿಸ್ಸೆಗೆ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದು ಉಳಿದ ಕೆಲವು ಆಸ್ತಿಗಳನ್ನು ಉಳಿಸಿಕೊಂಡಿದ್ದರು. ನನ್ನ ಪತಿ ಅಣ್ಣತಮ್ಮಂದಿರು ಅವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಉಳಿಸಿಕೊಂಡಿರುತ್ತಾರೆ. ಪುಟ್ಟಸ್ವಾಮಿಗೌಡರು ಕೆಲವೊಂದು ಆಸ್ತಿಗಳನ್ನು ಬ್ಯಾಂಕಿಗೆ ಆಧಾರ ಮಾಡಿದ್ದರು ಎಂದರೆ ಸಾಕ್ಷಿಯು 5 ಎಕರೆ 12 ಗುಂಟೆ ಜಮೀನನ್ನು ಮಾತ್ರ ಆಧಾರ ಮಾಡಿದ್ದರು ಎಂದು ನನ್ನ ಪತಿ ಮಾರಾಟ ಮಾಡಿದ ಜಮೀನುಗಳ ಸ.ನಂ. ನನಗೆ ಗೊತ್ತಿರುವುದಿಲ್ಲ. ನನ್ನ ಪತಿಯ ನಾಲ್ಕನೇ ತಮ್ಮ ವೆಂಕಟಪತಿಗೌಡ ತನಗೆ ಬಂದ ಹಿಸ್ಸೆಯನ್ನು ತಮ್ಮ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ವೆಂಕಟಪತಿಗೌಡರಿಗೆ ಒಬ್ಬನೇ ಮಗ ಎಂದು ನುಡಿಯುತ್ತಾರೆ . ಪುಟ್ಟಸ್ವಾಮಿಗೌಡರ ಹೆಣ್ಣುಮಕ್ಕಳು ತಮಗೆ ಹಿಸ್ಸೆ ಬೇಡ ಎಂದು ಹಿಸ್ಸೆ ಮಾಡಿಕೊಡುವಾಗಲೇ ಹೇಳಿದ್ದರು ಎಂದರೆ ಸರಿ. ನನ್ನ ಮದುವೆ 1973 ರಲ್ಲಿ ಆಗಿದ್ದು ಪಂಪ್ ಸೆಟ್ಟಾಗಿ ಮಾಡಿದ ಸಾಲವನ್ನು ತೀರಿಸಲು ಸದರಿ ಆಸ್ತಿಗಳನ್ನು ಬ್ಯಾಂಕಿಗೆ ಆಧಾರ ಮಾಡಿರುತ್ತಾರೆ . ಪುಟ್ಟಸ್ವಾಮಿಗೌಡರ ಮಕ್ಕಳಲ್ಲಿ ವೆಂಕಟಪತಿಗೌಡ ಮತ್ತು ಕಾಳೇಗೌಡ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದರು. ನಾವೆಲ್ಲರು ಚೆನ್ನಾಗಿಯೇ ಇದ್ದೇವೆ . ವೆಂಕಟಪತಿಗೌಡರ ಆದಾಯ ಎಷ್ಟಿತ್ತು ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ . ವೆಂಕಟಪತಿಗೌಡರ ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ . ವೆಂಕಟಪತಿಗೌಡರ ಹೆಂಡತಿಯ ಕೆಲವು ಆಸ್ತಿಗಳನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ . ಸ.ನಂ. 70 ರಲ್ಲಿನ ಜಮೀನನ್ನು ಪುಟ್ಟಸ್ವಾಮಿಗೌಡರು ಬ್ಯಾಂಕಿಗೆ ಆಧಾರ ಮಾಡಿದ್ದರು . ನನ್ನ ಪತಿ ಬೆಟ್ಟೇಗೌಡರಿಗೆ ಹಿಸ್ಸೆ ಸ.ನಂ. 70 ರಲ್ಲಿ ಬಂದಿತ್ತು . ಸದರಿ ಸ.ನಂ. ನ ಆಸ್ತಿ ಹರಾಜಿಗೆ ಬಂದ ವಿಚಾರ ನನಗೆ ಗೊತ್ತು . 2015ರಲ್ಲಿ ನನ್ನ ಪತಿ ಬೆಟ್ಟೇಗೌಡರು ನಿಧನ ಹೊಂದಿರುತ್ತಾರೆ. ಅವರು ಬದುಕಿದ್ದಾಗಲು ಸಹ ಬ್ಯಾಂಕಿನಿಂದ ಹರಾಜಾದ ಸ್ವತ್ತುಗಳ ವಿಚಾರವಾಗಿ ಯಾರ ವಿರುದ್ದವು ನ್ಯಾಯಾಲಯದಲ್ಲಿ ದಾವೆ ಹೂಡಿರುವುದಿಲ್ಲ . ಜವರೇಗೌಡ ಬಿನ್ ಚಿಕ್ಕಬೆಟ್ಟೇಗೌಡ ಯಾರು ಎಂದರೆ ನನಗೆ ಗೊತ್ತಿಲ್ಲ . ಸ.ನಂ. 70 ರಲ್ಲಿ 15 ಎಕರೆ 37 ಗುಂಟೆ ಜಮೀನು ಜವರೇಗೌಡರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ .

ಪುಟ್ಟೇಸ್ವಾಮೀಗೌಡರು ಯಾವಾಗ ನಿಧನ ಹೊಂದಿದರು ಎಂದರೆ ನನಗೆ ಗೊತ್ತಿಲ್ಲ . ನಾನು ವಿವಾಹವಾದ **4-5** ವರ್ಷಗಳಲ್ಲಿ ಮರಣ ಹೊಂದಿದರು . ಸ.ನಂ. **70** ರ ಜಮೀನು ವಿಚಾರವಾಗಿ ನನ್ನ ಪತಿ ಮತ್ತು ಅಣ ್ಣ ತಮ್ಮಂದಿರು ಎಪಿ ನ್ಯಾಯಾಲಯಕ್ಕೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಆದರೆ ನನ್ನ ಪತಿಗೆ ತಿಳಿದಿತ್ತು . ಹೆಚ್ ಪಿ ಕಾಳೇಗೌಡರು ಹೆಚ್ ಪಿ ರಾಮಕೃಷ ರವರಿಂದ ಕೆಲವೊಂದು ಸ್ವತ್ತುಗಳನ್ನು ಕ್ರಯಕ್ಕೆ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಷೆಡ್ಯುಲ್ ಸ್ವತ್ತುಗಳ ಬಗ್ಗೆ ಎಕ್ಸಿಕ್ಯೂಷನ್ **Asst. Register of Co-Operative Society, Sakaleshapura Sub-Division** ನಲ್ಲಿ ಹಣದ ವಸೂಲಾತಿಗಾಗಿ ಹೆಚ್ ಜವರೇಗೌಡ ರ ಸನ್ ಆಫ್ ಪುಟ್ಟಸ್ವಾಮಿಗೌಡ ಮತ್ತು ಇತರರ ವಿರುದ್ಧ ಬ್ಯಾಂಕಿನವರು ಕೇಸನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . ನನ್ನ ಪತಿ ಬೆಟ್ಟೇಗೌಡರು ಅವರ ಕುಟುಂಬದಲ್ಲಿ **1976** ರಲ್ಲಿ **12/04/1976** ರಲ್ಲಿ ಪಾಲು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿ . ತದ ನಂತರ ಬೆಟ್ಟೇಗೌಡರು ಪ್ರತ್ಯೇಕವಾಗಿ ಮನೆ ಕಟಿ ್ಟಕೊಂಡು ವಾಸವಾಗಿದ್ದರು ಎಂದರೆ ಸರಿ . ಅದೇ ರೀತಿಯಾಗಿ ನನ್ನ ಪತಿ ಬೆಟ್ಟೇಗೌಡರ ಅಣ್ಣ ತಮ್ಮದಿರು ಸಹ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿ . ಅದೇ ರೀತಿಯಾಗಿ ನನ್ನ ಪತಿಯ ಅಣ್ಣ ತಮ್ಮಂದಿರು ಅವರ ಅವರ ಹೆಸರುಗಳಿಗೆ ಪ್ರತ್ಯೇಕವಾಗಿ ಖಾತೆಯನ್ನು ಸಹ ಮಾಡಿಕೊಂಡಿದ್ದಾರೆ ಎಂದರೆ ನಮಗೆ ಗೊತ್ತಿಲ್ಲದೆ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಎರಡನೇ ವಾದಿ ಮೃತರಾಗಿರುತ್ತಾರೆ . ಸದರಿ ಮಗ ಮೃತನಾದ ಕಾರಣ ನನಗೆ ಬೇರೆ ಯಾರೂ ಇರುವುದಿಲ್ಲ .

(ಪ್ರತಿವಾದ ಪರ ಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕಾಲಾವಕಾಶವನ್ನು ನೀಡಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.

O.S. 99/2019

PW- 01